ಆ) ಸರ್ಕಾರಿ ಪ್ರಾಥಮಿಕ ಶಾಲೆಗಳ ಕುರಿತಂತೆ, ವರ್ಗಾವಣೆ ಹೊಂದಿದ ಶಿಕ್ಷಕರ ಸಂಖ್ಯೆ

ಹೊಸನಗರ ತಾಲ್ಲೂಕಿನಿಂದ – 15

ತೀರ್ಥಹಳ್ಳಿ ತಾಲ್ಲೂಕಿನಿಂದ – 19

ಪ್ರೌಢಶಾಲೆ

ಹೊಸನಗರ ತಾಲ್ಲೂಕಿನಿಂದ – 08

ತೀರ್ಥಹಳ್ಳಿ ತಾಲ್ಲೂಕಿನಿಂದ – 08

ಸರ್ಕಾರಿ ಪ್ರಾಥಮಿಕ ಶಾಲೆಗಳ ಕುರಿತಂತೆ, ವರ್ಗಾವಣೆಯಿಂದ ಬಂದ ಶಿಕ್ಷಕರ ಸಂಖ್ಯೆ

ಹೊಸನಗರ ತಾಲ್ಲೂಕಿಗೆ – 15

ತೀರ್ಥಹಳ್ಳಿ ತಾಲ್ಲೂಕಿಗೆ – 20

ಪ್ರೌಢಶಾಲೆ

ಹೊಸನಗರ ತಾಲ್ಲೂಕಿಗೆ – 10

ತೀರ್ಥಹಳ್ಳಿ ತಾಲ್ಲೂಕಿಗೆ – 11

ಇ) ಸರ್ಕಾರಿ ಪ್ರಾಥಮಿಕ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ವ್ಯವಸ್ಥೆ ಮಾಡಿ ಕ್ರಮ ಕೈಗೊಂಡಿದೆ.

ಪ್ರೌಢಶಾಲೆ

ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಪ್ರತಿ ವರ್ಷ ಉತ್ತಮ ಫಲಿತಾಂಶ ಬರುತ್ತಿದೆ ಖಾಲಿ ಹುದ್ದೆಗಳನ್ನು ಮುಂದಿನ ನೇಮಕಾತಿಯಲ್ಲಿ ಭರ್ತಿ ಮಾಡಲಾಗುವುದು. ಈ ತಾಲ್ಲೂಕಿಗೆ ಹೊರ ಜಿಲ್ಲೆಗಳಿಂದ ಈ ಸಾಲಿನ ವರ್ಗಾವಣೆಯಲ್ಲಿ 11 ಪ್ರೌಢಶಾಲಾ ಶಿಕ್ಷಕರು ಬಂದಿರುವುದರಿಂದ ಶೈಕ್ಷಣಿಕ ಪ್ರಗತಿಗೆ ಯಾವುದೇ ತೊಂದರೆಯಾಗುವುದಿಲ್ಲ.

ಈ) **ಸರ್ಕಾರಿ. ಪ್ರಾಥಮಿಕ**

ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಖಾಲಿ ಇರುವ ಒಟ್ಟು 4768 ಹುದ್ದೆಗಳಿಗೆ ಈಗಾಗಲೇ ಅಧಿಸೂಚನೆ ಹೊರಡಿಸಿದ್ದು, ಪ್ರಕರಣವು ರಾಜ್ಯದ ಉಚ್ಚನ್ಯಾಯಾಲಯದಲ್ಲಿದ್ದು, ತೀರ್ಮ ಬಂದ ಕೂಡಲೇ ಈ ಹುದ್ದೆಗಳನ್ನು ಭರ್ತಿಮಾಡಲಾಗುವುದು.

ಪ್ರೌಢಶಾಲೆ

ಮುಂದಿನ ನೇಮಕಾತಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

483 (854) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) :– ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಂಗಾ ಮೇಲ್ದಂಡೆ ಯೋಜನೆಯಡಿ ಮುಳುಗಡೆಯಾಗುತ್ತಿರುವ ನಿರಾಶ್ರಿತರಿಗೆ ಇದುವರೆಗೂ ಪರಿಹಾರ ಧನ ವಿತರಿಸದಿರಲು ಕಾರಣ ಏನು;

ಆ) ಈ ಹಣವನ್ನು ಕಾಲ ಮಿತಿಯೊಳಗೆ ವಿತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ತುಂಗಾ ಮೇಲ್ದಂಡೆ ಅಣೆಕಟ್ಟು ಕಾಮಗಾರಿ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಅಣೆಕಟ್ಟಿನ ಗೇಟ್ ಹಾಕಿದಲ್ಲಿ ಪರಿಹಾರ ಧನ ವಿತರಿಸದ ರೈತರ ಜಮೀನು ಮನೆ ಮುಳುಗಡೆಯಾಗುವುದು ಎಂಬ ಅಂಶ ಸರ್ಕಾರದ ಗಮನದಲ್ಲಿದೆಯೇ;

ಈ) ಪರಿಹಾರ ಧನ ವಿತರಿಸದೇ ನೀರನ್ನು ಸಹ ನಿಲ್ಲಿಸಿ, ಅಲ್ಲಿನ ನಿವಾಸಿಗಳನ್ನು ಬಲವಂತವಾಗಿ ಒಕ್ಕಲೆಬ್ಬಿಸುವುದನ್ನು ಸರ್ಕಾರ ಸಮಂಜಸವೆಂದು ಭಾವಿಸುವುದೇ?

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು):

ಅ) ಸದರಿ ಯೋಜನೆಯಡಿ ಮುಳುಗಡೆಯಾದ ಬೊಮ್ಮನಹಳ್ಳಿ ಹಾಗೂ ಕಣಗಾಲಕೊಪ್ಪ ಗ್ರಾಮಗಳ ಒಟ್ಟು 9-03 ಎಕರೆ ಕ್ಷೇತ್ರಕ್ಕೆ ಐತೀರ್ಪು ಘೋಷಿಸಿ ಅನುದಾನ ಬಿಡುಗಡೆಗೆ ಬೇಡಿಕೆಯಂತೆ ಒಟ್ಟು ರೂ. 13.16 ಲಕ್ಷಗಳನ್ನು ದಿನಾಂಕ 24.6.06 ರಂದು ಕರ್ನಾಟಕ ನೀರಾವರಿ ನಿಗಮದಿಂದ ಬಿಡುಗಡೆ ಮಾಡಲಾಗಿದೆ. ಇನ್ನುಳಿದ ಪ್ರಕರಣಗಳಲ್ಲಿ, ಐತೀರ್ಪು ಘೋಷಿಸಿ ಅನುದಾನದ ಬಿಡುಗಡೆಗೆ ಯಾವುದೇ ಪ್ರಸ್ತಾವನೆ ಬಾಕಿ ಇರುವುದಿಲ್ಲ.

ಆ) ಹೌದು.

ಇ) ಇದೆ.

ಈ) ಭಾವಿಸುವುದಿಲ್ಲ ಮತ್ತು ಇಂತಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

484 (838) ಶ್ರೀ ಆರ್. ಧ್ರುವನಾರಾಯಣ (ಸಂತೇಮರಳ್ಳಿ) :- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಧಾನಸಭಾ ಕ್ಷೇತ್ರಗಳ ಗ್ರಾಮೀಣಾ ಭಾಗದ ಹೋಬಳಿ ಕೇಂದ್ರಗಳಲ್ಲಿರುವ ಕೊಳಚೆ ಪ್ರದೇಶ ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ವಾಸ ಮಾಡುವ ಮೋಳೆಗಳು ಕೊಳಚೆ ಪ್ರದೇಶಕ್ಕಿಂತ ಹೆಚ್ಚಿನ ಅವ್ಯವಸ್ಥೆಯ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಈ ಮೋಳೆ ಪ್ರದೇಶವನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಂಡಿದೆಯೇ; ಇಲ್ಲದಿದ್ದಲ್ಲಿ, ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಎನ್. ಚಲುವರಾಯಸ್ವಾಮಿ (ವಸತಿ ಸಚಿವರ ಪರವಾಗಿ):

ಅ) ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ಭಾಗದ ಹೋಬಳಿ ಕೇಂದ್ರಗಳಲ್ಲಿರುವ ಕೊಳಚೆ ಪ್ರದೇಶಗಳು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ವಾಸ ಮಾಡುವ ಮೋಳೆಗಳ ಪ್ರದೇಶಗಳು ಮಂಡಳಿಯ ವ್ಯಾಪ್ತಿಗೆ ಬರುವುದಿಲ್ಲ.

ಆ) ಉದ್ಭವಿಸುವುದಿಲ್ಲ.